**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. : 5510/2021** **ದಿನಾಂಕಃ25-10-2025**

**ಸಿ ಡಬ್ಲೂ : 6**

**ಪಿ ಡಬ್ಲೂ : 6**

---------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

****

| | |
|---|---|
| ಸಾಕ್ಷಿದಾರನ ಹೆಸರು | ನಿಂಗಪ್ಪ ಧರಿಯಪ್ಪ ದೊಡವಾಡ |
| ಗಂಡ/ ತಂದೆಯ ಹೆಸರು | ಧರಿಯಪ್ಪ |
| ವಯಸ್ಸು | 65 ವರ್ಷ |
| ಉದ್ಯೋಗ | ಶೇತ್ಕಿ. |
| ವಾಸಸ್ಥಳ | ಸಾಃ ರಾಮತೀರ್ಥ |

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 1 ನನ್ನ ಊರಿನವನು ಎಂದರೆ ಸರಿ. ಆರೋಪಿಯು ನನ್ನ ತಮ್ಮನ ಮಗ. ಸುಮಾರು 4 ವರ್ಷಗಳ ಹಿಂದೆ ಜಗಳವಾಗಿತ್ತು, ನಾನು ಜಗಳವಾದ ಬಳಿಕ ಬಂದಿದ್ದೆ ಪೋಲೀಸರು ನನಗೆ ಸಹಿ ಮಾಡು ಎಂದು ಕೇಳಿಕೊಂಡರು ಅದಕ್ಕಾಗಿ ನಾನು ಸಹಿ ಮಾಡಿರುತ್ತೇನೆ. ಚಾಸಾ 1 ಹಾಗೂ ಆರೋಪಿತನ ಮದ್ಯೆ ಜಗಳವಾಗಿರುತ್ತದೆ. ನಾನು ಬಂದಾಗ ಸಂಜೆ 5.00 ಆಗಿತ್ತು. ನಾನು ಪೊಲೀಸರ ಮುಂದೆ ಜಗಳದ ವಿಷಯವಾಗಿ ಹೇಳಿಕೆ ನೀಡಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಗೊತ್ತಿಲ್ಲ. ನಾನು ಗಾಡಿಯನ್ನು ನೋಡಿಲ್ಲ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಮಾನ್ಯ ಸರ್ಕಾರಿ ವಕೀಲರು ಪಾಟೀ ಸವಾಲಿಗಾಗಿ ಅನುಮತಿ ಕೋರುತ್ತಾರೆ, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 23.08.2021 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಚಾಸಾ 1 ರವರು ನಮ್ಮ ಊರಿನ ಬಸ್ಸು ನಿಲ್ದಾಣದ ಹತ್ತಿರ ನಾನು ಹೋದಾಗ ಇದ್ದರು ಎಂದರೆ ಸರಿ . ಅದೇ ದಿನ ಮಧ್ಯಾಹ್ನ 3.00 ಗಂಟೆಗೆ ಆರೋಪಿಯು ಬಂದವನೆ ನನ್ನ ತಮ್ಮನೊಂದಿಗೆ ಜಗಳ ತೆಗೆದು ಅವಾಚ್ಯವಾಗಿ ಬೈಯತೊಡಗಿದ ಎಂದರೆ ಸರಿಯಲ್ಲ. ಆಗ ನಾನು ತಂಟೆಯನ್ನು ಬಿಡಿಸಿರುತ್ತೇನೆ ಎಂದರೆ ಸರಿಯಲ್ಲ.

ನಂತರ ಆರೋಪಿಯು ಹೀರೊ ಹೊಂಡಾ ಮೊಟಾರ ಸೈಕಲ ಎಮ್ ಹೆಚ್ 10 ಡಿ ಎಫ್ 0829 ನ್ನು ತೆಗೆದುಕೊಂಡು ಬಂದು ಜೋರಾಗಿ ಚಲಾಯಿಸಿ ಚಾಸಾ 1 ಈತನಿಗೆ ಹಾಯಿಸಿ ಕೆಳಗಡೆ ಕೆಡವಿ ಎಡಗೈಗೆ , ಎಡಭುಜಕ್ಕೆ ಹಾಗೂ ಮುಖಕ್ಕೆ ಗಾಯಪಡಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಂತರ ಆರೋಪಿಯು ಚಾಸಾ 1 ಈತನಿಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಧಮಕಿ ಹಾಕಿರುತ್ತಾನೆ  ಹಾಗೂ ಟ್ರ್ಯಾಕ್ಟರ ಹಾಯಿಸಿಬಿಡುತ್ತೇನೆ ಎಂದು ಭಯ ಪಡಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಂತರ ನಾನು , ಚಾಸಾ 7, 8 ಕೂಡಿಕೊಂಡು ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಜೀವ ಧಮಕಿ ಹಾಕಿರುತ್ತಾನೆ ಎಂದೆರ ಸರಿಯಲ್ಲ . ಈ ವಿಷಯವಾಗಿ ಚಾಸಾ 1 ಆರೋಪಿಯ ವಿರುದ್ದ  ಪಿರ್ಯಾದಿ ದಾಖಲಿಸಿರುತ್ತಾನೆ ಎಂದರೆನನಗೆ ಗೊತ್ತಿಲ್ಲ. ನಾವು ದಿಃ 24.08.2021 ರಂದು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಯನ್ನು ಅಲ್ಲಗಳೆದ ಕಾರಣ ಸದರಿ ಹೇಳಿಕೆಯನ್ನು ನಿಪಿ 8 ಎಂದು ಗುರುತಿಸಲಾಯಿತು. ಆರೋಪಿಯು ನಮ್ಮ ಊರಿನವನು ಆಗಿರುವುದರಿಂದ ಅವನಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ . ವಿ ಎಲ್ ಕೆ ವಕೀಲರಿಂದಃ</u>**

ನಾನು ಘಟನೆ ಯಾಗುವ ಸಮಯದಲ್ಲಿ ತೋಟದಲ್ಲಿ ಇದ್ದೆ ಎಂದರೆ ಸರಿ. ನಾನು ಘಟನೆಯನ್ನು ಕಣ್ಣಾರೆ ಕಂಡಿಲ್ಲ ಎಂದರೆ ಸರಿ. ನಾನು ಯಾವುದೇ ಜಗಳ ಬಿಡಿಸಿಲ್ಲ ಎಂದರೆ ಸರಿ. ಮೋಟಾರ ಸೈಕಲ ಯಾರದು ಇತ್ತು ಎಂದು ನನಗೆ ಗೊತ್ತಿಲ್ಲ. ಯಾವುದೇ ಘಟನೆ ಆಗಿಲ್ಲ ಹಾಗೂ ನಾನು ನೋಡಿಲ್ಲ ಎಂದರೆ ಸರಿ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.